# ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
4. **Note:** The lyrics mentioned without highlights are as per Ref. 1. Lyrics in Ref. 2 given in yellow highlights are slightly different and are given separately. The wordings in Ref. 3 are similar to Ref. 2 except few differences which are given in green highlights.
5. **Note:** Singer has followed lyrics as in Ref.2.

ರಾಗ ಮೋಹನ ಅಟ ತಾಳ

| | | |
|---|---|---|
| ಬಿಡೆ ನಿನ್ನ ಪಾದವ ಬಿಂಕವಿದೇಕೋ | | ಬಿಡೆ ನಿನ್ನ ಪಾದವ ಬಿಂಕವಿನ್ನೇಕೋ |
| ಕೊಡುವುದೊ ಅಭಿಷ್ಟವ ಕೋಪವಿದೇಕೋ | ‖ ಪ ‖ | ಕೊಡು ಮನದೀಷ್ಟವ ಕೋಪವಿದೇಕೋ |
| | | |
| ನೀರೊಳು ಪೊಕ್ಕರು ನಿನ್ನನು ಬಿಡೆ ಬೆನ್ನ | | ನೀರ ಪೊಕ್ಕರು ಬಿಡೆ ಬೆನ್ನಿನೊಳಗೆ, ಬಹು- |
| ಭಾರವ ಪೊತ್ತಿಹೆನೆಂದರು ಬಿಡೆನೋ | | ಭಾರ ಪೊತ್ತೆನೆಂದು ಬಿದ್ದರು ಬಿಡೆನು |
| ಕೋರೆಯ ತೋರಿಸಿ ಕೊಸರಿಕೊಂಡರು ಬಿಡೆ | | ಕೋರೆಯ ಮಸೆಯುತ ಕೊಸರಿಕೊಂಡರು ಬಿಡೆ |
| ಘೋರ ರೂಪವ ತೋರಿ ಘುಡು ಘುಡಿಸಲು ಬಿಡೆ | ‖ 1 ‖ | ಘೋರ ರೂಪವ ತಾಳಿ ಘುರ ಘುರಿಸಲು ನಾನು |
| | | |
| ತಿರುಕನೆಂದರು ಬಿಡೆ ತರೆದ ತಾಯ್ಕೊರಳ | | ತಿರುಕನೆಂದರು ಬಿಡೆ ತಿಳಿದು ತಾಯ ಕೊರಳ |
| ಕೊರೆಕನೆಂದರು ಬಿಡೆ ಅವನಿಯೊಳು | | ತರಿಕನೆಂದರು ನಿನ್ನ ನಾ ಬಿಡೆನೋ |
| ಕರಕರೆಗಾರದೆ ಕಾಡ ಸೇರಲು ಬಿಡೆ | | ಪೊರೆಯೆ ಪಿತನ ವಾಕ್ಯ ಕಾಡ ಸೇರಲು ಬಿಡೆ |
| ದುರಳ ಮಡುವಿನಲ್ಲಿ ಧುಮಿಕಿದರೂ ಬಿಡೆ | ‖ 2 ‖ | (ಗರಳ) ದುರಳ ಮಡುವಿನಲಿ ಧುಮುಕಿದರೂ ನಾನು |
| | | |
| ಕಡು ಬತ್ತಲೆ ಕೈಲಿ ಕಾಸಿಲ್ಲೆಂದರು ಬಿಡೆ | | ಕಡು ಬತ್ತಲಾಗಿ ಎನ್ನ ಕೈಲಿ ಕಾಸಿಲ್ಲೆಂದರು ಬಿಡೆ |
| ಒಡನೆ ತೇಜಿಯನೇರಿ ಓಡಲು ಬಿಡೆನೋ | | ಒಡನೆ ಹಯವೇರಿ ಓಡಿದರು ಬಿಡೆನು |
| ಒಡೆಯ ಪುರಂದರ ವಿಠ್ಠಲನೇ ಎನ್ನ | | ಪೊಡವಿಯೊಳಗೆ ನಮ್ಮ ಪುರಂದರ ವಿಠಲನೆ |
| ಕಡಹಾಯ್ಸುವ ಭಾರ ಕರ್ತನು ನೀನೆಂದು | ‖ 3 ‖ | ಕಡೆಹಾಯಿಸುವ ಭಾರ ನಿನ್ನದದಕೆ ನಾನು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಬಿಂಕ –** ಬಿಗುಮಾನ, ಹೆಮ್ಮೆ, ಅಹಂಕಾರ

**ನೀರೊಳು ಪೊಕ್ಕರು** = ಮತ್ಸ್ಯಾವತಾರ

**ಬೆನ್ನ ಭಾರ ಪೊತ್ತಿಹೆ** = ಕೂರ್ಮಾವತಾರ

**ಕೊರೆಯ ..... ಬಿಡೆ** = ವರಾಹಾವತಾರ

**ಕೊಸರಿಕೊಂಡರು –** ಕೈ ಝಾಡಿಸಿ ತಪ್ಪಿಸಿಕೊಂಡು ಹೋದರೂ.

**ಘೋರ ರೂಪವ ತೋರಿ** = ನರಸಿಂಹಾವತಾರ

**ತಿರುಕ** = ವಾಮನಾವತಾರ

**ತರಿದ .... ಕೊರೆಕ** = ಪರಶುರಾಮ

**ಕಾಡು ಸೇರಲು ಬಿಡೆ** = ರಾಮಾವತಾರ

**ಆರದೆ** = ಸಮರ್ಥನಾಗದೆ

**ಗರಳ** = ವಿಷ

**ಮಾಡುವಿನಲ್ಲೂ ಧುಮಿಕಿದರು ಬಿಡೆ** = ಕೃಷ್ಣಾವತಾರ

**ಕಡು ಬತ್ತಲೆ** = ಬೌದ್ಧಾವತಾರ

**ತೇಜಿಯನೇರಿ ಓಡಲು** = ಕಲ್ಕ್ಯವತಾರ

**ಭಾರ ಕರ್ತ** = ಹೊಣೆಗಾರ

**ಕಡೆಹಾಯಿಸುವ ಭಾರ ನಿನ್ನದು –** ಪಾರುಗಾಣಿಸುವ, ಸಂಸಾರದ ಕಡಲನ್ನು ದಾಟಿಸುವ ಹೊಣೆ ನಿನ್ನದು.

**Classification:** Keerthane
**Ankita:** purandara vittala
**Location:** NA
**Category:** Dashavatara
**Sub-Category:** sittu, gurva, kudure, kaadu, bhumi, tayi, dashavatara
**Pravachana:** NA
**Explanation:** NA